<u>ದಿಃ **08.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ.ಡಿ.ಎಸ್.ಎ ವಕೀಲರಿಂದಃ ವಾದಿಯ ಪರವಾಗಿಃ</u>

**18)** ನಾನು 10 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆ ಮತ್ತು ಇಂಗ್ಲೀಷ ಭಾಷೆ ನನಗೆ ಸರಿಯಾಗಿ ಓದಲು ಬರುವದಿಲ್ಲ ಮತ್ತು ಸಾಕ್ಷಿಯು ಮುಂದುವರೆದು ನನಗೆ ಇಂಗ್ಲೀಷ ಭಾಷೆ ಸಂಪೂರ್ಣವಾಗಿ ಓದಲು ಬರುವದಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪರಮಾಣ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಸ್ವತಃ ಮಾಹಿತಿ ಕೊಟ್ಟಿದ್ದೇನೆ. ನನ್ನ ಜನ್ಮ ದಿನಾಂಕಃ 26.01.1970 ನೇ ಇಸ್ವಿ ಅಂತಾ ಇರುತ್ತದೆ. ನನ್ನ ತಂದೆಯಾದಂತಹ ಚನ್ನವೀರಪ್ಪ ಇವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಮೂರು ಜನ ಹೆಣ್ಣುಮಕ್ಕಳು ಅಂತಾ ಇರುತ್ತದೆ. ಸದರಿ ಮೂರು ಜನ ಗಂಡು ಮಕ್ಕಳು ಹೆಸರುಗಳು ನನಗೆ ಗೊತ್ತಿರುತ್ತವೆ.1) ರಮೇಶ 2) ಪ್ರಕಾಶ 3) ಉಮೇಶ ನಂತರ ಹೆಣ್ಣುಮಕ್ಕಳು 4) ಸುನಂದಾ 5) ಲತಾ 6) ಗೀತಾ ಅಂತಾ ಇರುತ್ತಾರೆ.

**19)** ನನ್ನ ಸಹೋದರನಾದಂತಹ ಪ್ರಕಾಶ ಈತನು ಈಗ ಮೃತಪಟ್ಟಿದ್ದಾನೆ. ನನ್ನ ಸಹೋದರನಾದಂತಹ ಪ್ರಕಾಶ ಈತನು ಅಂದಾಜು 1981 ಅಥವಾ 1982 ನೇ ಇಸ್ವಿಯಲ್ಲಿ ಮೃತಪಟ್ಟಿದ್ದಾನೆ. ಸದರಿ ಮೃತಪಟ್ಟಂತಹ ಪ್ರಕಾಶ ನನಗಿಂತ ಹಿರಿಯ ಸಹೋದರನಾಗಿದ್ದನು. ನನ್ನ ಸಹೋದರನಾದ ಪ್ರಕಾಶ ಈತನು ಮೃತಪಟ್ಟಾಗ ಆತನಿಗೆ 18 ವರ್ಷ ವಯಸ್ಸು ಇತ್ತು. ಮೃತ ಪ್ರಕಾಶ ಈತನು ಮೃತಪಟ್ಟಾಗ ಆತನಿಗೆ ಮದುವೆಯಾಗಿರಲಿಲ್ಲ ಮತ್ತು ಆತನಿಗೆ ಯಾವುದೇ ರೀತಿ ಸಂತಾನ ಇರಲಿಲ್ಲ. ನಾನು ಈ ಮೊದಲು ಹಾವೇರಿಯ ಪ್ರಿನ್ಸಿಪಲ್ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ.ಸಿ ನ್ಯಾಯಾಲಯ ಹಾವೇರಿಯಲ್ಲಿ ದಾಖಲುಪಡಿಸಿದ ಅಸಲು ದಾವೆ ನಂಬರಃ 8/2025 ನನ್ನ ಸಹೋದರನಾದ ಮೃತ ಪ್ರಕಾಶ ಈತನನ್ನು ಸದರಿ ದಾವೆಯಲ್ಲಿ

ಪಕ್ಷಗಾರನಾಗಿ ಮಾಡಿರುವದಿಲ್ಲ ಅಂದರೆ ಸರಿ ಮತ್ತು ಸದರಿ ಪ್ರಕಾಶ ಈತನ ಕುರಿತಾಗಿ ನಾನು ಸದರಿ ಪ್ರಕರಣದಲ್ಲಿ ಹಾಜರುಪಡಿಸಿದಂತಹ ವಂಶಾವಳಿಯಲ್ಲಿಯೂ ಸಹ ಆತನ ಹೆಸರನ್ನು ತೋರಿಸಿಲ್ಲ ಅಂದರೆ ಸರಿ.

**20)** ನಾನು ಖಾಯಂ ತರೀಖವಾಗಿ ಇಜಾರಿ ಲಕಮಾಪುರದಲ್ಲಿರುವಂತಹ ಮಾರುತಿ ನಗರ ಹಾವೇರಿ ತಾಲೂಕ ಜಿಲ್ಲಾ ಹಾವೇರಿಯಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದೇನೆ. ನಾನು ಇಜಾರಿಲಕಮಾಪುರದಲ್ಲಿರುವಂತಹ ಮಾರುತಿನಗರದಲ್ಲಿ ಅಂದಾಜು 25 ವರ್ಷದಿಂದ ವಾಸ ಮಾಡಿಕೊಂಡು ಬರುತ್ತಿದ್ದೇನೆ. ನಾನು ನನ್ನ ಸ್ವಂತ ಮನೆಯಲ್ಲಿ 25 ವರ್ಷದಿಂದ ಇಜಾರಿಲಕಮಾಪುರದಲ್ಲಿರುವಂತಹ ಮಾರುತಿ ನಗರದಲ್ಲಿ ವಾಸ ಮಾಡಿಕೊಂಡು ಬಂದಿದ್ದೇನೆ. ನಾನು ವಾಸ ಮಾಡಿಕೊಂಡು ಬರುವಂತಹ ಮನೆಯ ಪ್ಲಾಟ ನಂಬರಃ 141 ಎಫ್ ನಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದೇನೆ. ನಾನು ಪ್ಲಾಟ ನಂಬರಃ 141 ಎಫ್ ಅದನ್ನು 2005 ರಲ್ಲಿ ರೂ.85,000/- ಗಳಿಗೆ ಖರೀದಿಗೆ ತೆಗೆದುಕೊಂಡಿದ್ದೇನೆ. ನಾನು ಪ್ಲಾಟ ನಂಬರಃ 141 ಎಫ್ ಇದನ್ನು 2006 ರಲ್ಲಿ ಮನೆಯನ್ನು ಕಟ್ಟಿಸಿಕೊಂಡಿದ್ದೇನೆ. ನಾನು ಕಟ್ಟಿಸಿರುವಂತಹ ಮನೆ ಆರ್.ಸಿ.ಸಿ ಮನೆಯಾಗಿರುತ್ತದೆ. ಪ್ಲಾಟ ನಂಬರಃ 141 ಎಫ್ ಇದರ ವಿಸ್ತೀರ್ಣ ನನಗೆ ಸರಿಯಾಗಿ ಗೊತ್ತಿರುವದಿಲ್ಲ. ನಾನು ಪಾಟ ನಂಬರಃ 141 ಎಫ್ ಇದರಲ್ಲಿ ಕಟ್ಟಿಸಿರುವಂತಹ ಆರ್.ಸಿ.ಸಿ ಮನೆಯನ್ನು ಎಷ್ಟು ಸ್ಕ್ವೇರ ಪೂಟನಲ್ಲಿ ಕಟ್ಟಿಸಿದ್ದೇನೆ ಎಂದು ನೆನಪಿಲ್ಲ. ಸದರಿ ಮನೆಯನ್ನು ಕಟ್ಟಿಸಲು ಹಣವನ್ನು ನನ್ನ ಮಾವನವರು ಕೊಟ್ಟಿರುತ್ತಾರೆ.

**21)** ನಾನು ವಾಸಿಸುವಂತಹ ಕಟ್ಟಡದಲ್ಲಿ ಕಟ್ಟಿಸಿರುವಂತಹ ಅಂಗಡಿ ಯಲ್ಲಿ ಕಿರಾಣಿ ವ್ಯಾಪಾರ ಮಾಡಿಕೊಂಡು ನನ್ನ ಜೀವನ ಸಾಗಿಸಿಕೊಂಡು ಬರುತ್ತಿದ್ದೇನೆ. ಪ್ಲಾಟ ನಂಬರಃ 141 ಎಫ್ ಇದರಲ್ಲಿ 2006 ನೇ ಇಸ್ವಿಯಲ್ಲಿ ನಾನು ಮನೆಯನ್ನು ಕಟ್ಟಿಸುವ ಪೂರ್ವದಲ್ಲಿ ಮತ್ತು ಅದರಲ್ಲಿ ಇರುವ ಅಂಗಡಿಯಲ್ಲಿ ವ್ಯಾಪಾರ ಮಾಡುವ ಮೊದಲು ಮೆಣಸಿನಕಾಯಿ ವ್ಯಾಪಾರ

ಮಾಡುತ್ತಿದ್ದೆ. ನಾನು ಮೆಣಸಿನಕಾಯಿ ವ್ಯಾಪಾರವನ್ನು ಹಳ್ಳಿ ಹಳ್ಳಿಗೆ ಹೋಗಿ ಮಾರಾಟ ಮಾಡುತ್ತಿದ್ದೆ. ನಾನು 10 ನೇ ತರಗತಿ ವಿಧ್ಯಾಭ್ಯಾಸ ಮುಗಿದ ನಂತರ ನಾನು ಯಾವುದೇ ಕೃಷಿ ಜಮೀನುಗಳಲ್ಲಿ ಕೃಷಿ ಕೆಲಸ ಮಾಡಿರುವದಿಲ್ಲ. ಸಾಕ್ಷಿಯು ಮುಂದುವರೆದು ನಾನು ಕೃಷಿ ಕೆಲಸವನ್ನು ಸಹ ಮಾಡುತ್ತಿದ್ದೆ ಎಂದು ಮುಂದುವರೆದು ನುಡಿಯುತ್ತಾರೆ . ಇಜಾರಿಲಕಮಾಪುರದಲ್ಲಿ ಇರುವಂತಹ ಪ್ಲಾಟ ನಂಬರ: 141 ಎಫ್ ಇದನ್ನು ನಮ್ಮ ಮಾವನವರಾದ ಹನುಮಂತಪ್ಪ ಇವರ ಹೆಸರಿಗೆ ಖರೀದಿಗೆ ತೆಗೆದುಕೊಳ್ಳಲಾಗಿರುತ್ತದೆ.

**22)** ನನ್ನ ಮಾವನವರಾದಂತಹ ಹನುಮಂತಪ್ಪ ಇವರು ಹಾವೇರಿ ಜಿಲ್ಲೆಯಲ್ಲಿರುವಂತಹ ದೇವಿಹೊಸೂರ ಗ್ರಾಮದವರಾಗಿರುತ್ತಾರೆ. ನಮ್ಮ ಮಾವನವರಿಗೆ ಸೇರಿದ ಕೃಷಿ ಜಮೀನು ಇತ್ತು. ಹಾವೇರಿ ತಾಲೂಕಿನಲ್ಲಿ ಬರುವಂತಹ ಇಜಾರಿಲಕಮಾಪುರದ ಮಾರುತಿ ನಗರದಲ್ಲಿರುವ ಪ್ಲಾಟ ನಂಬರ: 141 ಎಫ್ ಇದನ್ನು ನನ್ನ ಮಾವನವರು ನನಗೆ ಖರೀದಿ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**23)** ನನ್ನ ತಂದೆಯಾದಂತಹ ಚೆನ್ನವೀರಪ್ಪ ಇವರು ಕೆ.ಎಲ್.ಇ ಸಂಸ್ಥೆ ಹಾವೇರಿಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ನನ್ನ ತಂದೆಯವರಾದಂತಹ ಚೆನ್ನವೀರಪ್ಪ ಇವರು ಪ್ರಾಧ್ಯಾಪಕರಾಗಿ ಯಾವ ಇಸ್ವಿಯಲ್ಲಿ ನಿವೃತ್ತಿ ಹೊಂದಿರುತ್ತಾರೆ ಎಂದು ನನಗೆ ಇಸ್ವಿ ಗೊತ್ತಿರುವದಿಲ್ಲ. ನನ್ನ ತಂದೆ ಚೆನ್ನವೀರಪ್ಪ ಇವರು 2013 ನೇ ಇಸ್ವಿಯಲ್ಲಿ ಮೃತಪಟ್ಟಿದ್ದಾರೆ. ನನ್ನ ತಂದೆ ಪ್ರಾದ್ಯಾಪಕ ವೃತ್ತಿಯಿಂದ ನಿವೃತ್ತಿಯಾದ ನಂತರ ಹಾವೇರಿಯಲ್ಲಿ ಇರುವಂತಹ ಸರ್ವೆ ನಂಬರ: 23 ಇದರಲ್ಲಿರುವ ಪ್ಲಾಟ ನಂಬರ: 21 ಮತ್ತು 22 ಇವುಗಳನ್ನು ಖರೀದಿಗೆ ತೆಗೆದುಕೊಂಡಿದ್ದರು ಅಂದರೆ ಸರಿ. ಅದರಲ್ಲಿ ಒಂದು ಪ್ಲಾಟನ್ನು ನನ್ನ ತಂದೆಯವರು ಅವರ ಜೀವಿತ ಕಾಲದಲ್ಲಿ ಮಾರಾಟ ಮಾಡಿದ್ದಾರೆ ಅಂದರೆ ಸರಿ. ನಮ್ಮ ತಂದೆಯು ಅವರ ಜೀವಿತ ಕಾಲದಲ್ಲಿ ಒಂದು ಪ್ಲಾಟನ್ನು ಮಾರಾಟ ಮಾಡಿ

ಬಂದಂತಹ ಹಣದಿಂದ ಪ್ಲಾಟ ನಂಬರಃ 141 ಎಫ್ ಇದನ್ನು ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಅದೇ ರೀತಿ ನಮ್ಮ ತಂದೆ ನಿವೃತ್ತಿಯಾದ ನಂತರ ಅವರಿಗೆ ಬರುತ್ತಿದ್ದಂತಹ ಪಿಂಚಣಿ ಹಣದಲ್ಲಿ ಪ್ಲಾಟ ನಂಬರಃ 141 ಎಫ್ ಇದರಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಆರ್.ಸಿ.ಸಿ ಮನೆಯನ್ನು ಕಟ್ಟಿಸಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಈ ದಾವೆಯಲ್ಲಿ ಕಾಣಿಸಿರುವಂತಹ ದಾವಾ ಶೆಡ್ಯೂಲ್ ಬಿ ರಿ.ಸ.ನಂಬರಃ 23 ಇದರಲ್ಲಿ ಇರುವ ಪ್ಲಾಟ ನಂಬರಃ 22 ವಾದಿಗೆ ಸೇರಲಿ ಅವರ ತಂದೆ ಜೀವಿತ ಕಾಲದಲ್ಲಿ ಸರ್ವೆ ನಂಬರಃ 141 ಎಫ್ ಇದನ್ನು ನನ್ನ ಹೆಂಡತಿಯ ಹೆಸರಿಗೆ ಖರೀದಿ ತೆಗೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ. ಈ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ, ನಾನು ಆ ಕುರಿತಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ ಸದರಿ ದಾವೆಯು ಚಾಲ್ತಿಯಲ್ಲಿದ್ದಾಗ ನಾನು ಇನ್ನೊಂದು ವಾಟ್ನಿ ದಾವೆಯನ್ನು ಹಾವೇರಿಯ ಮಾನ್ಯ ಜೆ.ಎಂ.ಎಫ್ .ಸಿ ನ್ಯಾಯಾಲಯದಲ್ಲಿ ಅಸಲು ದಾವಾ 8/2025 ಇದನ್ನು ವಾದಿಗೆ ತೊಂದರೆ ಕೊಡಲು ಸುಳ್ಳಾಗಿ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

**24)** ನಾನು ಈ ಪ್ರಕರಣದಲ್ಲಿ ನನ್ನ ಪರವಾಗಿ ಹಾಜರುಪಡಿಸಿದಂತಹ ದಾಖಲಾತಿಗಳನ್ನು ಸಂಪೂರ್ಣವಾಗಿ ಓದಿ, ತಿಳಿದುಕೊಂಡು ನಂತರ ಹಾಜರುಪಡಿಸಿರುತ್ತೇನೆ ಅಂದರೆ ಸರಿ. ನಮ್ಮ ತಾಯಿ ಮತ್ತು ನಮ್ಮ ತಂದೆ ಇವರ ಮದುವೆಯು ಯಾವ ಇಸ್ವಿಯಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. ನನ್ನ ತಾಯಿಯ ತವರು ಮನೆ ಹತ್ತಿಮತ್ತೂರ ಗ್ರಾಮ ಆಗಿರುತ್ತದೆ. ನನ್ನ ತಾಯಿಯ ತವರುಮನೆಯ ವಿಳಾಸವನ್ನು ಹೇಳಲು ಬರುತ್ತದೆ. ನಮ್ಮ ತಾಯಿಯ ತವರು ಮನೆಯ ವಿಳಾಸ ನೀಲಪ್ಪ ತಂದೆ ನಿಂಗಪ್ಪ ರೊಡ್ಡಣ್ಣನವರ ಅಂತಾ ಇರುತ್ತದೆ . ಅವರು ಹತ್ತಿಮತ್ತೂರ ಗ್ರಾಮದಲ್ಲಿ ವಾಸ ಇದ್ದರು. ನಮ್ಮ ತಾಯಿಯ ತಂದೆಯವರಿಗೆ ನನ್ನ ತಾಯಿಯನ್ನು ಸೇರಿಸಿ ಎಷ್ಟು ಜನ ಮಕ್ಕಳು ಇರುತ್ತಾರೆ

ಎಂದು ನನಗೆ ಗೊತ್ತಿರುವದಿಲ್ಲ. ನಮ್ಮ ತಾಯಿಯ ತಂದೆಗೆ ಇಬ್ಬರೂ ಮಕ್ಕಳು ಇರುತ್ತಾರೆ. ಅವರ ಹೆಸರುಗಳೆಂದರೆ ಗಿರಿಜವ್ವ, ಪಾರ್ವತೆವ್ವ ಇಬ್ಬರೂ ಮಾತ್ರ ಹೆಣ್ಣುಮಕ್ಕಳು ಇರುತ್ತಾರೆ. ನಮ್ಮ ತಾಯಿಯ ತಂದೆಗೆ ಗಂಡುಮಕ್ಕಳು ಸಹ ಇರುತ್ತಾರೆ, ಅದರಲ್ಲಿ ಕೆಲವು ಜನ ಮೃತಪಟ್ಟಿದ್ದಾರೆ ಮತ್ತು ಇನ್ನೂ ಕೆಲವು ಜನ ಜೀವಂತ ಇದ್ದಾರೆ. ನನ್ನ ತಾಯಿಯ ತಂದೆಗೆ ಇರುವಂತಹ ಗಂಡು ಮಕ್ಕಳ ಹೆಸರು ಗೊತ್ತಿರುವದಿಲ್ಲ. ನಾನು ಹಾವೇರಿಯಲ್ಲಿ ಜನಿಸಿರುತ್ತೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಲಾಗಿ, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.